# ‘ನೆಗೆಟಿವ್ ಶೇಡ್ ಹೀರೊ ಆಗಿದ್ದೇನೆ’

‘ಕನ್ನಡತಿ’ ಧಾರಾವಾಹಿ ಮೂಲಕ ಮನೆ ಮಾತಾಗಿರುವ ನಟ ಕಿರಣ್ ರಾಜ್, ಈಚೆಗೆ ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡ ಪೋಸ್ಟ್ ಮೂಲಕ ಜನರ ಗಮನ ಸೆಳೆದಿದ್ದಾರೆ.

ತಾವು ಅಭಿನಯಿಸುತ್ತಿರುವ ‘ರಾನಿ’ ಸಿನಿಮಾ ಶೀರ್ಷಿಕೆಯನ್ನು ಆಕಾಶದಲ್ಲಿ ಹಾರಾಡುತ್ತಾ ಬಿಡುಗಡೆಗೊಳಿಸಿದ್ದ ಕಿರಣ್ ರಾಜ್, ಸಿನಿಮಾ ಬಗ್ಗೆ ತಮಗಿರುವ ಅಪಾರ ಪ್ರೀತಿಯನ್ನೂ ಈ ಮೂಲಕ ಪ್ರತಿನಿಧಿಸಿದ್ದಾರೆ.

ರಾನಿ ಸಿನಿಮಾ ಕುರಿತು ಮಾತನಾಡಿರುವ ಅವರು, ‘ಕನ್ನಡತಿ ಧಾರಾವಾಹಿಯಿಂದ ಒಳ್ಳೆ ಹೆಸರು, ಪ್ರಸಿದ್ಧಿಯ ಜೊತೆಜೊತೆಗೆ ಹಲವು ಅವಕಾಶಗಳೂ ದೊರೆತಿವೆ. ಇದಾಗ್ಯೂ ಅದೇ ರೀತಿಯ ಪಾತ್ರವನ್ನು ಮಾಡಲು ನಾನು ಇಷ್ಟಪಡುವುದಿಲ್ಲ. ಮತ್ತೆ ಅದೇ ಧಾಟಿಯ, ಒಳ್ಳೆಯ, ಹೋಂ ಬಾಯ್ ಪಾತ್ರದಲ್ಲಿ ಕಾಣಿಸಿಕೊಳ್ಳುವುದಿಲ್ಲ. ‘ಕನ್ನಡತಿ’ ಧಾರಾವಾಹಿ ಅಂತಿಮವಾಗುತ್ತಲೇ ಹೀಗೆ ನಾನು ನಿರ್ಧರಿಸಿದ್ದೆ. ಮುಂದಿನ ನನ್ನ ಪಾತ್ರ ತಿರುಗಿ ನೋಡುವಂಥದ್ದಿರಬೇಕೆಂದು ಬಯಸಿದ್ದೆ’ ಎಂದು ಹೇಳಿಕೊಂಡಿದ್ದಾರೆ.

ಸದ್ಯ, ಗುರುತೇಜ್ ಶೆಟ್ಟಿ ನಿರ್ದೇಶನದ ಈ ಆ್ಯಕ್ಷನ್ ಸಿನಿಮಾ ‘ರಾನಿ’ಯಲ್ಲಿ, ಕಿರಣ್ ಅವರನ್ನು ಹೊಸ ಅವತಾರದಲ್ಲಿ ತೋರಲಾಗುತ್ತಿದೆಯಂತೆ. “ಈ ಸಿನಿಮಾದಲ್ಲಿ ರಕ್ತವಿದೆ, ಆ್ಯಕ್ಷನ್ ಇದೆ. ನೆಗೆಟಿವ್ ಶೇಡ್ ಇರುವ ಹೀರೊ ಆಗಿದ್ದೇನೆ. ಪ್ರಾಮಾಣಿಕವಾಗಿ ನೆಗೆಟಿವ್ ಪಾತ್ರವನ್ನೇ ಮಾಡಿದರೂ ಅದು ಚೆನ್ನಾಗಿ ಕಾಣುತ್ತದೆ ಎಂಬುದು ನನಗೆ ಈಗೀಗ ಅನಿಸುತ್ತಿದೆ. ಕನ್ನಡತಿ ಧಾರಾವಾಹಿಯಲ್ಲಿ ನಾನು ಸಿಗರೇಟು ಸೇದುತ್ತಿದ್ದರೂ, ಮಹಿಳಾ ಅಭಿಮಾನಿಗಳು ‘ನೀವು ಎಷ್ಟು ಚೆನ್ನಾಗಿ ಸ್ಮೋಕ್ ಮಾಡುತ್ತೀರ’ ಎಂದು ಹೊಗಳುತ್ತಿದ್ದರು” ಎಂದಿದ್ದಾರೆ ಕಿರಣ್.

ಸಿನಿಮಾ ಶೀರ್ಷಿಕೆ ಬಿಡುಗಡೆ ಮಾಡಲು ದುಬೈನಲ್ಲಿ 13 ಸಾವಿರ ಅಡಿಯಿಂದ ಸ್ಕೈ ಡೈವ್ ಮಾಡಿರುವ ಕಿರಣ್ ರಾಜ್ ಸಾಹಸಕ್ಕೆ ಅಭಿಮಾನಿಗಳು ಅಚ್ಚರಿ ವ್ಯಕ್ತಪಡಿಸಿದ್ದಾರೆ.







## ಠಾಣೆ: ಸಾಮಾಜಿಕ ಕಥನ, ಪ್ರೇಮಪಠಣ

ಸಮಾಜದಲ್ಲಿ ಮಾದಕ ದ್ರವ್ಯ ವ್ಯಸನದ ಪರಿಣಾಮಗಳನ್ನು ಸೂಕ್ಷ್ಮವಾಗಿ ತೆರೆದಿಡುವ ಜೊತೆಗೆ, ವ್ಯಸನಕ್ಕೆ ಒಳಗಾದ ಯುವಕರನ್ನು ಗಾಳವಾಗಿಸಿಕೊಂಡು ರಾಜಕಾರಣಿಗಳು ಹೇಗೆ ತಮ್ಮ ಕುತಂತ್ರಗಳನ್ನು ಹೆಣೆಯುತ್ತಾರೆ ಎಂಬುದನ್ನು ಸಿನಿಮಾ ಮೂಲಕ ತೋರುವ ಪ್ರಯತ್ನದಲ್ಲಿದ್ದಾರೆ ಭಗತ್ ರಾಜ್.

ಮಾದಕ ವ್ಯಸನದ ಕಥಾಹಂದರವನ್ನಿಟ್ಟುಕೊಂಡು ಅವರು ‘ಠಾಣೆ’ ಸಿನಿಮಾ ಮಾಡುತ್ತಿದ್ದು, ಇಂದಿನ ಸಮಾಜದ ಸ್ಥಿತಿಯನ್ನು ಜನರ ಮುಂದೆ ಎಳೆಎಳೆಯಾಗಿ ಬಿಡಿಸಿಡುವ ಪ್ರಯತ್ನದಲ್ಲಿದ್ದಾರೆ. ಆ್ಯಕ್ಷನ್ ಮಾತ್ರವಲ್ಲದೆ ನವಿರಾದ ಪ್ರೇಮ ಪ್ರಸಂಗಗಳೂ ಸಿನಿಮಾಗೆ ಜೋಡಣೆಯಾಗಿವೆ.

ಹದಿನೈದು ವರ್ಷಗಳಿಂದ ರಂಗಭೂಮಿಯಲ್ಲಿ ತೊಡಗಿಕೊಂಡಿರುವ, ಸಾಹಸ ಕಲಾವಿದರೂ ಆಗಿರುವ ಪ್ರವೀಣ್ ‘ಠಾಣೆ’ ಸಿನಿಮಾದ ನಾಯಕ ನಟ. ನಟಿ ಹರಿಣಾಕ್ಷಿ ಕೂಡ ರಂಗಭೂಮಿ ಹಿನ್ನೆಲೆಯವರೇ. ರಾಜ್ ಬೆಳವಾಡಿ, ಪಿ.ಡಿ.ಸತೀಶ್ ಸೇರಿದಂತೆ ರಂಗಭೂಮಿಯ ಹಲವು ಕಲಾವಿದರು ಸಿನಿಮಾದಲ್ಲಿ ನಟಿಸಿದ್ದಾರೆ.

ಭಗತ್ ರಾಜ್ ಈ ಹಿಂದೆ ‘ಸೂಟ್’ ಎಂಬ ಸಿನಿಮಾ ನಿರ್ದೇಶಿಸಿದ್ದು, ‘ಠಾಣೆ’ ಅವರ ಎರಡನೇ ಸಿನಿಮಾ. ಈ ಚಿತ್ರಕ್ಕೆ ಪ್ರಶಾಂತ್ ಸಾಗರ್ ಛಾಯಾಗ್ರಹಣವಿದ್ದು, ಸಂಕಲನ ಸುರೇಶ್ ಅರಸ್ ಅವರದ್ದು. ಈಚೆಗೆ ನಟ ಧ್ರುವ ಸರ್ಜಾ, ಸಿನಿಮಾ ಪೋಸ್ಟರ್ ಬಿಡುಗಡೆ ಮಾಡಿದ್ದಾರೆ.